

# ಮರದ ಸೈಕಲ್



ಸೈಕಲ್ ಸವಾರಿಯನ್ನು ಹಲವಾರು ಜನ ಇಷ್ಟ ಪಡುತ್ತಾರೆ. ಉತ್ತಮ ವ್ಯಾಯಾಮವನ್ನು ನೀಡುವುದರ ಜೊತೆಗೆ ಹೊಗೆಯುಗುಳದ ಸೈಕಲ್‌ಗಳು ಪರಿಸರಕ್ಕೆ ಒಂದು ಚೂರೂ ಹಾನಿಯನ್ನುಂಟು ಮಾಡುವುದಿಲ್ಲ. ಪೋಲಂಡ್ ದೇಶದ 62 ವರ್ಷ ವಯಸ್ಸಿನ ಕೊಳಾಯಿ ರಿಪೇರಿ ಮಾಡುವ ಅಜ್ಜನೊಬ್ಬ ಅತ್ಯಂತ ವಿಶಿಷ್ಟವಾದ ಪರಿಸರ ಸ್ನೇಹಿ ಸೈಕಲ್‌ಗಳನ್ನು ತಯಾರಿಸಿದ್ದಾನೆ.

ಸ್ಲಾವೊಮಿರ್ ವೆರೆವ್ಕೊವಿಜ್ ಹೆಸರಿನ ಈ ಅಜ್ಜ ಸಂಪೂರ್ಣವಾಗಿ ಮರದಿಂದಲೇ ಸೈಕಲ್ ನಿರ್ಮಿಸಿದ್ದಾನೆ. ಬಿಯಾಲಾ ಪೋಡ್ಲಾಸ್ಕಾದಲ್ಲಿರುವ ಸ್ಲಾವೊಮಿರ್‌ಗೆ ತಾನೊಬ್ಬ ಮಹಾನ್ ಕಲಾವಿದನಾಗಬೇಕೆಂಬ ಹಂಬಲ. ಮರದ ಕೆತ್ತನೆ ಕೆಲಸದ ನೈಪುಣ್ಯ ಗೊತ್ತಿರುವುದರಿಂದ, ಅದರಿಂದಲೇ ಏನಾದರೂ ಸಾಧಿಸಿ ತೋರಬೇಕೆಂಬುದು ಈತನ ಅತೀವ ಆಸೆ. ಅಂತೆಯೇ ಈತ ಸರಣಿ ಸೈಕಲ್‌ಗಳನ್ನು ಪೂರ್ತಿಯಾಗಿ ಮರದಿಂದಲೇ ತಯಾರಿಸಿದ್ದಾನೆ. ಈ ಮರದ ಸೈಕಲ್‌ಗಳ ನಿರ್ಮಾಣದ ವಿಶೇಷವೇನೆಂದರೆ ಇದರಲ್ಲಿ ಒಂದೇ ಒಂದು ಗ್ರಾಂನಷ್ಟಾದರೂ ಲೋಹ ಅಥವಾ ಪ್ಲಾಸ್ಟಿಕ್ ಬಳಸಿಲ್ಲ. ಸಣ್ಣ ಮರದ ತುಂಡೊಂದು ಸ್ಲಾವೊಮಿರ್ ಕಣ್ಣಿಗೆ ಬಿದ್ದರೆ ಸಾಕು ಯಾರೂ ಊಹಿಸದ ರೀತಿಯಲ್ಲಿ ಅದು ಸೈಕಲ್‌ನ ಒಂದು ಭಾಗವಾಗಿ ರೂಪುಗೊಳ್ಳುತ್ತದೆ. ಇದಕ್ಕಾಗಿ ಈತ ಬಳಸುವ ಉಪಕರಣಗಳು ಉಳಿ, ಗರಗಸ ಮಾತ್ರ.

ಆಸನ(ಸೀಟ್)ತುಳಿಯುವ ಪೆಡಲ್, ಸೈಕಲ್‌ನ ಚೈನ್ ಸಹ ಈತ ಕೈಯಿಂದಲೇ ಸುಂದರವಾಗಿ ಕೆತ್ತುತ್ತಾನೆ. ಇವುಗಳ ತಯಾರಿಸಲು ಈತ ಓಕ್, ಆಶ್, ಬೀಚ್, ಪ್ಲೈವುಡ್ ಮುಂತಾದ ಮರಗಳನ್ನು ಬಳಸುತ್ತಾನಂತೆ. ಮರದಿಂದಲೇ ನಿರ್ಮಿಸಿದ ಬೇರೆ ಬೇರೆ ಭಾಗಗಳನ್ನು ಜೋಡಿಸಲು ಸ್ಕ್ರೂಗಳನ್ನು ಉಪಯೋಗಿಸುವುದಿಲ್ಲ. ಅದರ ಬದಲಾಗಿ ಮರದ ಬೆಣೆಗಳನ್ನು ಬಳಸುತ್ತಾನಂತೆ. ದಿನಾಲೂ ಮರದ ಸೈಕಲ್ ಮೇಲೆಯೇ ಪಯಣಿಸುವ ಸ್ಲಾವೊಮಿರ್‌ನು ಈ ಸೈಕಲ್‌ಅನ್ನು ಪ್ರೀತಿಯಿಂದ ಮರದ ಡೈನೊಸರ್ (ವುಡನ್ ಡೈನೊಸಾರ್) ಎಂದು ಕರೆಯುತ್ತಾನೆ. ಇಡೀ ಜಗತ್ತಿನಲ್ಲಿ ಸಂಪೂರ್ಣ ಮರದಿಂದಲೇ ಸವಾರಿ ಯೋಗ್ಯ ಸೈಕಲ್ ಅನ್ನು ತಯಾರಿಸಿದ ಕೀರ್ತಿ ಸ್ಲಾವೊಮಿರ್‌ಗೆ ಸಲ್ಲುತ್ತದೆ. ಇವುಗಳು ಪೋಲಂಡ್‌ನ ಗ್ಯಾಲರಿಗಳಲ್ಲಿ ಹಾಗೂ ಮ್ಯೂಸಿಯಂಗಳಲ್ಲಿ ಪ್ರದರ್ಶನ ಕಂಡು ಹಲವರ ಪ್ರಶಂಸೆಗೆ ಪಾತ್ರವಾಗಿವೆ.

■ **ಪ್ರಿಯಾಂಕ ವಿ. ಹೆಚ್.**